2) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾಗುವ ಉತ್ತರಗಳು.

**ಶ್ರೀ ಎಂ. ಸಿ. ನಾಣಯ್ಯ** (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಸಭಾಧ್ಯಕ್ಷರೇ, 15 ನೇ ಪಟ್ಟಿಯಲ್ಲಿರುವ 45 ಪ್ರಶ್ನೆಗಳ ಪೈಕಿ 30 ಪ್ರಶ್ನೆಗಳ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ವಿಷಯ :- ಹಿಂದುಳಿದ ಜಾತಿ ಹಿಂದುಳಿದ ವರ್ಗದ ಅಭಿವೃದ್ಧಿ ನಿಗಮಕ್ಕೆ ನಿಗಧಿಯಾದ ಹಣ.**

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 806 (156)

ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) :- ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪ- ಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1995-96 ನೇ ಸಾಲಿನಲ್ಲಿ ಹಿಂದುಳಿದ ಜಾತಿ ಹಿಂದುಳಿದ ವರ್ಗದ ಅಭಿವೃದ್ಧಿ ನಿಗಮಕ್ಕೆ ಯಾವ ಯಾವ ಯೋಜನೆಗೆ ಎಷ್ಟು ಹಣ ನಿಗಧಿ ಮಾಡಿಲಾಗಿದೆ.

ಆ) 31-3-96 ರ ಒಳಗಾಗಿ ಬಿಡುಗಡೆ ಆದ ಹಣವೆಷ್ಟು; ಖರ್ಚಾದ ಹಣ ವೆಷ್ಟು?

ಶ್ರೀ ಮಾಲಿಕಯ್ಯ ಗುತ್ತೇದಾರ್ :- (ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರಿಂದ ಅನುಮೋದಿಸಲ್ಪಟ್ಟಿದೆ.)

ಅ) ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ 1995-96 ರ ಸಾಲಿಗೆ ಕೆಳಕಂಡ ಯೋಜನೆಗಳಿಗೆ ನಿಗದಿ ಮಾಡಿದ ಹಣದ ವಿವರ ಈ ಕೆಳಕಂಡಂತಿದೆ :-

| ಕ್ರ. ಸಂ. | ಯೋಜನೆಯ ವಿವರ | ಪರಿಷ್ಕರಿಸಲ್ಪಟ್ಟ ಆಯವ್ಯಯದಲ್ಲಿ ನಿಗದಿಗೊಳಿಸಿದ ಹಣ ರೂ. ಲಕ್ಷಗಳಲ್ಲಿ |
|---|---|---|
| 1) | ಮಾರ್ಜಿನ್ ಹಣ ಸಾಲದ ಯೋಜನೆ | 335-00 |
| 2) | ಸ್ವಯಂ ಉದ್ಯೋಗ ಯೋಜನೆ (ವಾಹನ ಚಾಲನಾ ತರಬೇತಿ) | 10-00 |
| 3) | ಪೋಸ್ಟ್ ಡಿಪ್ಲೊಮೋ ಇನ್ ಫೋರ್‌ಮನ್ ಶಿಪ್ ತರಬೇತಿ | 3-00 |
| 4) | ವೃತ್ತಿಪರ ತರಬೇತಿ | 15-00 |
| 5) | ಸಾಮೂಹಿಕ ನೀರಾವರಿ ಯೋಜನೆ | 270-00 |
| | ಒಟ್ಟು | 683-00 |

31-3-96 ರ ಒಳಗೆ ಯೋಜನಾವಾರು ಬಿಡುಗಡೆ ಮಾಡಿದ ಮತ್ತು ಖರ್ಚಾದ ಹಣದ ವಿವರ ಈ ಕೆಳಕಂಡಂತಿದೆ. :-

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ಯೋಜನೆ. | ಬಿಡುಗಡೆ ಮಾಡಿದ ಹಣ ರೂ. | ಖರ್ಚಾದ ಹಣ ರೂ. |
|---|---|---|---|
| 1) | ಮಾರ್ಜಿನ್ ಹಣ ಸಾಲದ ಯೋಜನೆ | 385-00 | 460.38 |
| 2) | ಸ್ವಯಂ ಉದ್ಯೋಗ ಯೋಜನೆ (ವಾಹನ ಚಾಲನಾ ತರಬೇತಿ) | 10-00 | 11.14 |
| 4) | ವೃತ್ತಿಪರ ತರಬೇತಿ ಯೋಜನೆ | 15-00 | 15.07 |
| 3) | ಪೋಸ್ಟ್ ಡಿಪ್ಲೊಮೋ ಇನ್ ಪೋರ್‌ಮನ್‌ಶಿಪ್ ಯೋಜನೆ | 3.00 | 1.43 |
| 5) | ಸಾಮೂಹಿಕ ನೀರಾವರಿ ಯೋಜನೆ | 270-00 | 200.00 |
| | ಒಟ್ಟು | 683-00 | 688.02 |

**ವಿಷಯ :- 1995-96 ರಲ್ಲಿ ಬೆಳೆದ ಕಬ್ಬಿನ ಪ್ರಮಾಣ**

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 807 (155)

ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) :- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ 1995-96 ನೇ ಸಾಲಿನ ಹಂಗಾಮಿನಲ್ಲಿ ಬೆಳೆದ ಕಬ್ಬಿನ ಪ್ರಮಾಣವೆಷ್ಟು?

ಆ) 15-6-96 ರವರೆಗೆ ಯಾವ ಯಾವ ಸಕ್ಕರೆ ಕಾರ್ಖಾನೆಗಳು ಎಷ್ಟು ಪ್ರಮಾಣದ ಕಬ್ಬು ಅರೆದಿದೆ.

ಇ) ಅರೆಯಲು ಆಗದೇ ಉಳಿದ ಕಬ್ಬಿನ ಪ್ರಮಾಣವೆಷ್ಟು?

ಶ್ರೀ ಉಮೇಶ್ ವಿ. ಕತ್ತಿ (ಸಕ್ಕರೆ ಸಚಿವರು) :-

ಅ) ಸುಮಾರು 200.00 ಲಕ್ಷ ಟನ್ ಕಬ್ಬಿನ ಉತ್ಪಾದನೆ ಆಗಿರುವ ಅಂದಾಜು ಮಾಡಲಾಗಿದೆ.

ಆ) ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ದಿನಾಂಕ 15-6-96 ಕ್ಕೆ ಇದ್ದಂತೆ ಸುಮಾರು 10.4 ಲಕ್ಷ ಟನ್ ಕಬ್ಬು ಅರೆಯದೆ ಉಳಿದಿರುತ್ತದೆ.